# ಕನ್ನಡ ಕಾವ್ಯಗಳಲ್ಲಿ ಮಾದರ ಚೆನ್ನಯ್ಯ

**ಡಾ:ಕಾಳಿಂಗ ಡಿ ಗೊಳಸಂಗಿ**

ಮುಖ್ಯಸ್ಥರು, ಕನ್ನಡ ವಿಭಾಗ

ಶ್ರೀ ಚ.ಚ. ಹೆಬ್ಬಾಳ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಗೊಳಸಂಗಿ.

ಕರ್ನಾಟಕ

12ನೇ ಶತಮಾನದ ಕಾಲಘಟ್ಟವನ್ನು ಅನುಲಕ್ಷಿಸಿದಾಗ ಕನ್ನಡ ಸಾಹಿತ್ಯದಲ್ಲಿ ಹೊಸ ನೆಲೆಯೊಂದನ್ನು ಗುರುತಿಸಬಹುದಾಗಿದೆ. ಕೇವಲ ಅರಸೊತ್ತಿಗೆಗೆ ಸೀಮಿತವಾದ ಪಂಡಿತಮಾನ್ಯವಾದ ಸಾಹಿತ್ಯ ಒಂದಿತ್ತು. ಈ ಜಾಡ್ಯವನ್ನು ಕಳಚಿಒ ಜನಸಾಮಾನ್ಯರನ್ನು ಲಕ್ಷಕ್ಕಿಕೊಂಡು ವಚನಾಕಾರರು ಯಾರದೇ ಮುಲಾಜು ಇಲ್ಲದೇ ಯಾವ ಕಟ್ಟುಪಾಡುಗಳಿಗೆ ಒಳಗಾಗದೆ ಸಮಾಜೋಧಾರ್ಮಿಕ ಚಳುವಳಿಯನ್ನು ಕೈಕೊಂಡು ಮನುಕುಲದ ಮನ ಮೈಲಿಗೆಯನ್ನು ತೊಳೆದು, ಜನಕಲ್ಯಾಣಕ್ಕಾಗಿ ಶರಣದರಿಂದ ವಚನ ಸಾಹಿತ್ಯ ಹುಟ್ಟಿಕೊಂಡಿತು.

ಅರಮನೆಯಿಂದ, ಗುರು ಮನೆಯಿಂದ, ಗುಡಿಸಲಿನಿಂದ ಬಂದ ವಚನಕಾರರು, ಮನದ ಅಂತರಂಗವನ್ನು ತೊಳೆಯಲು ಶುದ್ಧ ಕಾಯಕ ನಿಷ್ಠೆ ಹಿನ್ನೆಲೆಯಲ್ಲಿ ವಚನಗಳನ್ನು ರಚಿಸಿದರು. ಅಂತಹ ವಚನಕಾರರಲ್ಲಿ ಮುಂಚೂಣಿಯಲ್ಲಿ ಬರುವ ಜೇಡರದಾಸಿಮಯ್ಯನಂತೆ ಮಾದರ ಚನ್ನಯ್ಯನು ಒಬ್ಬನು.

ಚೆನ್ನಬಸವ ಪುರಾಣದಲ್ಲಿ ವಿರುಪಾಕ್ಷಪಂಡಿತನು ಚೆನ್ನಬಸವೇಶ್ವರನ ಚರಿತೆಯಾಗಿಯೆ ಮೀಸಲಾದ ಮೊದಲನೆಯ ಗ್ರಂಥವಿದು. ಆದರೆ ಈ ಚರಿತೆಯಿಂದ ಪ್ರಾರಂಭವಾಗಿ ಶಿವಲೀಲೆ ಇತರ ಶರಣರ ಚರಿತ್ರೆ ವೀರಶೈವ ಸಿದ್ಧಾಂತ ಸಂಪ್ರದಾಯ ಮುಂತಾಗಿ ಅನೇಕ ವಿಷಯಗಳ್ನೊಳಗೊಂಡು ಇದು ವೀರಶೈವ ಮತದ ಕೈಪಿಡಿಯಾಗಿ ಪರಿಣಮಿಸಿದೆ.

ಶಿವಕವಿ ಸದು ಮಲಜ್ಞಾನಿ ಸಕಲಾಗಮ ಪುರಾಣ ಕೋಶವಿದು. ವಿರುಪಾಕ್ಷಪಂಡಿತನು ಈ ಮಹಾಕೃತಿಯಲ್ಲಿ ಒಂದು ಪವಾಡವನ್ನೇ ಮೆರೆದಿದ್ದಾನೆ. ವೀರಶೈವಾಮೃತ ಪುರಾಣದಂತೆ ಇದು ವೀರಶೈವ ವಿಶ್ವಕೋಶವಾಗಿದೆ. ಆದರೆ ಚಾರಿತ್ರಿದ್ಯೆಯಶ್ರಮ ಮತ್ತು ಕವಿತಾ ಪೌಢಿಮೆಯಲ್ಲಿ ಇದರ ರೀತಿ ಬೇರೆಯಾಗಿದೆ ಇದರಲ್ಲಿ ಮಿಗಿಲಾದ ಪಾಂಡಿತ್ಯವಿದೆ ಕವಿತ್ವಿದೆ, ಸಮಯ ನಿಷ್ಠೆಯಿದೆ, ಶೈಲಿ ವೈಶಿಷ್ಟ್ಯವಿದೆ.

ಹರ ಕವಿ ವಿರುಪಾಕ್ಷ ಪಂಡಿತನು ತನ್ನ ಕೃತಿ ಚೆನ್ನಬಸವ ಪುರಾಣದಲ್ಲಿ ಇನ್ನೊಂದು ಪದ್ಯದಲ್ಲಿ ಗುಬ್ಬಿ ಮಲ್ಲಣಾರ್ಯನು ಚೆನ್ನಯ್ಯನನ್ನು ಸ್ಮರಿಸಿರುವನು.

ಒಂದು ದಿನ ವಿಶ್ವೇಶ್ವರಂ ತೆರಯಮರೆಯೊಳು ಮುನ್ನಿ
ನಂದಿದಿಂ ಚಪೊಪರಿವುತಾರೋಗಿಸದಿರಲಗಿ
ನಿಂದೆ ಮೆಚ್ಚಿನೆ ಸಲಸೆ ಏಕೆನಲ ಮಾದರಚೆನ್ನಯ್ಯನೊಡನೆಸಲಸಿ
ಬಂದೆವೆನಲಾತನಂ ತೋರೆನಗೆನಲ ತೋರ:
ಲಂದಾತನಡಿಗೆರಗಿ ಪೊಗಳುತಿರೆ ಗಿರಿರಾಜ
ನಂದನೆಯ ವರನಿರರ್ವಂ ತನ್ನ ಕೈಲಾಸಪುರಕಿದೆ ಕರದೊಯ್ಯದನ್ನು

ಹೀಗೆಯ ಮುಂದುವರೆದು ನೋಡೊದಾಗ ಕ್ರಿ.ಶ 1560 ರಲ್ಲಿದ್ದ ತೋಂಟದಾರ್ಯರ ಸಂಪ್ರದಾಯದಲ್ಲಿ ಬಂದ ಶ್ರೀ.ಮ.ನಿ. ಜದ್ಗುರು ತೋಂಟದಾರ್ಯ ಸಂಸ್ಥಾನ ಮಠದ ಚರಮಮೂರ್ತಿಗಳು ಉಜದ್ದಾಮ ಪಂಡಿತರು, ಮಹಾಕವಿಗಳಾಗಿದ್ದ ಶಿವಾನುಭವಿ ವಿರಕ್ತತೋಂಡದಾರ್ಯರು ಬರೆದ ಸಿದ್ದೇಶ್ವರ ಪುರಾಣದಲ್ಲಿ ಚೆನ್ನಯ್ಯನನ್ನು ಹೀಗೆ ಉಲ್ಲೇಖಿಸಿದ್ದಾರೆ.

ಮುನ್ನ ಕಣ್ಣಪದ್ವದೇವ ಕಾಳಹಸ್ತಿಯೊಳು
ತನ್ನ ಜಿವ್ಹೆಯೋಳು ಸವಿನೋಡಿ ಕೊಡಲ್ದು
ಪನ್ನಗಾಭರಣ ಸವಿದು ಚೋಳಿಯಕ್ಕನುಂಡುದನೆ ಸವಿದನಲ್ಲದೇ
ಚೆನ್ನನುಂಡು ಮಿಕ್ಕಂಬಲಿಯ ಸವಿದನಿದು
ನನ್ನೀಯಂತಪ್ಪ ದ್ರುಷ್ಟವಕಂಡು ಗಳಪುವುದಿ
ದನ್ನರಿಯಂ ಲಿಂಗಕ್ಕೆ ಜಂಗಮದ ಸುಪ್ರಸಾದಂ ಸಲ್ಲದೆ ಭಾವಿಸೆ.

ಈ ತೆರನಾಗಿ ಹಲವಾರು ಕವಿಗಳು ಚೆನ್ನಯ್ಯನನ್ನು ತಮ್ಮ ಕಾವ್ಯಗಳಲ್ಲಿ ವರ್ಣಿಸಿದಂತೆ ಅವನ ಭಕ್ತಿಯ ಹಿರಿಮೆಯನ್ನು ಮುಪ್ಪಿನಷಡಕ್ಷರಿಯೂ ಕೂಡಾ ವಿವರಿಸಿದ್ದಾನೆ. ವೀರಶೈವ ಸಾಹಿತ್ಯದಲ್ಲಿ ಹಾಡಿನ ಪರಂಪರೆ ಬಸವೇಶ್ವರರ ಕಾಲದಲ್ಲಿ ಮೊದಲಾಗಿ ಮತ್ತೆ ನಿಜಗುಣ ಶಿವಶರಣರ ಕಾಲಕ್ಕೆ ತೆಲೆಯೆತ್ತಿತು. ಅದನ್ನು ಹಲವು ಶಿವಶರಣರು ಮುಂದೆ ಸಾಗಿಸಿಕೊಂಡು ಹೋದರು. ಮುಪ್ಪಿನ ಷಡಕ್ಷರಿಯು ಮಾದರಚೆನ್ನಯ್ಯನಲ್ಲದೆ ಇತರ ಶರಣರನ್ನು ಭಕ್ತಿಯಿಂದ ಹಾಡಿ ಹೊಗಳಿದ್ದಾರೆ. ಹೀಗೆ ಮುಂದುವರೆದಂತೆ ನೋಡಿದಾಗ ಶಿವಶರಣರ ತ್ರಿಪದಿಗಳಲ್ಲಿಯೂ ಕೂಡಾ ಚೆನ್ನಯ್ಯ ಮತ್ತು ಚೋಳನನ್ನು ಕುರಿತು ಸ್ಥುತಿಸಿದ ಉಲ್ಲೇಖಗಳಿವೆ.

ಚೋಳನೆ ಕರಿಕಾಲ ಚೋಳನೆ ಚೆನ್ನಯ್ಯ
ಚೋಳನೆ ವರವೀರ ಚೋಳನೆ ಸತ್ಯೆಯೆಂದು
ಚೋಳನೆ ಎನಗೆ ಕೃಪೆಯಾಗು.

ಹೊನ್ನಯ್ಯ ಅಗ್ವನಿಯ ಹೊನ್ನಯ್ಯ ಬ್ಯಾಡರ
ಚೆನ್ನಯ್ಯ ಶಿವನುಂಡ ಮಾದರ
ಚೆನ್ನಯ್ಯ ಎನಗೆ ಕೃಪೆಯಾಗು

ಅದರಂತೆ ಭೀಮ ಕವಿಯು ತನ್ನ ಬಸವ ಪುರಾಣದಲ್ಲಿ ಮಾದರಚನ್ನಯ್ಯ ಕ್ರಿ.ಶ. 1369 ರಲಿದ್ದ ಎಂಬ ವಿಷಯ ಕುರಿತು ಉಲ್ಲೇಖಿಸಿದ್ದಾನೆ.

ಚೆನ್ನಯ್ಯನ ನಾಲಗೆಗೆ ಕೈಗಳು
ಚೆನ್ನನೆಯ ಬಂದಿದ ವ್ರಾಪೃಥು
ಳೊನ್ನತಕರಾಂಭುಜಯುವರಂ ಚಲುವಾಯಿತ್ಯಯ್ಯಂಗೆ
ನನ್ನನ್ನುತ್ತೋತ್ತಮ ಭಕ್ತಿಯಸುರತರು
ವನ್ನೆಯದಿದ ಸರಯ್ಯ ಬಿತ್ತಲು
ಮುನ್ನಚೀವೃರಿದಂತೆ ಮೆರದವು ಬೆರಳುದೋಷ ಸ್ಥಳದ

ಇನ್ನು ಮುಂದುವರೆದು ವಿರಶೈವಾಮೃತ ಪುರಾಣದಲ್ಲಿ ಚನ್ನಯ್ಯನನ್ನು ನೋಡಿದಾಗ ಈತ ಕ್ರಿ.ಶ 1561 ರ ವರೆಗೆ ಜೀವಿಸಿದ್ದನೆಂದು ಕ್ರಿ.ಶ 1513 ರಿಂದ 1530 ರಲ್ಲಿ ವಿರಶೈವಾಮೃತ ಪುರಾಣ ರಚಿಸಿದ ಗುಬ್ಬಿಮಲ್ಲನಾರ್ಯಾನು ತನ್ನ ಕೃತಿಯಲ್ಲಿ ಚನ್ನಯ್ಯನನ್ನು ಸ್ತುತಿಸಿದ್ದಾನೆ.

ಕೇಳಿದರು ಮುನ್ನ ಸಾಮರ್ಯಥ್ಯರಹ ಸತ್ತಕವಿಜ
ನಾಳಿಯಂತಾ ಪ್ರಬಂಧದ ಮುಂದಿದೇಂ ಸರಿಯೇ
ಯೋಳೋಕಿ ಸಲ್ಕೆನಲು ಪುತ್ರಸೋವೆತ ದಿವ್ಯಾನ್ನಪಾಣಾಗ್ರಹಬಕ್ಷ
ಮೆಳೆಸಿದ ರಸರಸಾಯನವನಾ ಕರಿಕಾಲ
ಚೋಳನೃಪನಪಿರ್ಯಸನೊಲ್ಲದಾ ಚನ್ನಯ್ಯನ
ತಾಳಿಗೆಗೆ ಕೈನೀಡಿ ಸುಲಿದಂತೆ ಕವಿತ ಪಿಯೊಕ್ಷವಂತ್ತಿದ್ದ ಮೋಹಿಪಂ

ಈ ಮೇಲಿನ ಪದ್ಯದ ಸಾಲುಗಳನ್ನು ಹೀಗೆ ವಿವರಸಬಹದು. ಪೂರ್ವದಲ್ಲಿ ಸಮರ್ಥರಾದ ಕವಿಗಳು ಅನೇಕ ಕಾವ್ಯಗಳನ್ನು ಓದಿರುವುದು ಆ ಕಾವ್ಯಗಳಿಗೆ ವೀರಶೈವಾಮೃತ ಅನೇಕ ಕವಿಗಳು ಓದಿದ್ದು ಆ ಕಾವ್ಯಗಳಿಗೆ ವೀರಶೈವಾಮೃತ ಪುರಾಣವು ಸಮನಾದುದೇ ಎಂದು ಪ್ರಶ್ನಿಸಿದರೆ ಕೆಲಕಾಲ ಚೋಳಭೂಪಾಲನು ಸಾವಿರ ಹರಿವಾಣಗಳಲ್ಲಿ ಷಡ್ರಸಗಳಿಂದ ಕೂಡಿದ ದಿವ್ಯಾನ್ನರ್ಪಿಸಿದರೂ ಅದನ್ನೊಲ್ಲದೆ ಅಧಿಕ ಭಕ್ತಿಭಾವದ ಮಾದರಚೆನ್ನಯ್ಯನ ಹರಿವಾಣಕ್ಕೆ ಕೈ ನೀಡಿ ಶಿವನು ಸುರಿದ ಅಮೃತದಂತೆ



IJFANS
International Journal of
Food And Nutritional Sciences

ಈ ಕವಿತಾಮೃತವು ವಿವರಿಸುವುದು. ಇನ್ನೊಂದು ಪದ್ಯದಲ್ಲಿ ಗುಬ್ಬಿ ಮಲ್ಲನಾರ್ಯನು ಮಾದರಚೆನ್ನಯ್ಯನನ್ನು ಹಿಗೆ ಸ್ಮರಿಸಿರುವನು.

ಅಡವಿಯಟ್ಟಿಯ ಹಣ್ಣ ವಿಷಮನ ಮೃತವ ಮಾಡಿ
ಮಡಿದ ಜಂಗಮಕೆ ಹಣ್ಣರ್ದ ಬಸವಂಗಳಿದ
ಮಡದಿಗಾ ಗೋಣಿಯ ತಪ್ಪಿಸಿಗಸವಂಕೊಟ್ಟ ತೊರೆಯನಿಬ್ಬಗೆ ಮಾಡುತ
ನಡೆದ ಮುಸುಡಿಯ ಚೌಡಯ್ಯಂ ಸುರಗಿ ಚೌಡಯ್ಯಂ
ಕೊಡೆ ತುತ್ತಕರಿಕಾಳಚೋಳ ಮಾದರ ಚೆನ್ನ
ನೊಡನುಂಡ ಚೋಳಿಯಕಕ್ಕನ ಬಾಯಿತುತ್ತಕೊಂಡುದ ಶರಣರು ಸುರಿದರಲಾ

ಈ ಪದ್ಯದ ಸಾರಾಂಶ ಹೀಗಿದೆ. ಮುಸುಟಿಯ ಚೌಡಯ್ಯನು ಇಟ್ಟಿಯ ಹಣ್ಣಿನ ವಿಷವನ್ನು ಅಮೃತವನ್ನಾಗಿ ಮಾಡಿದನು. ಮಡಿದ ಜಂಗಮನಿಗೆ ಹಾಗೂ ಗೋಣಿಯ ತಪಸ್ವಿಗಳಿಗೆ ಪ್ರಾಣವನಿತ್ತನು ತೊರೆಯನ್ನು ಎರಡು ಭಾಗ ಮಾಡಿದನು ಎಂದು ಸುರಗಿಯ ಚೌಡಯ್ಯ, ಮಾದರಚೆನ್ನಯ್ಯ, ಚೋಳಿಯಕ್ಕ, ಶಿವಚಿತ್ತ ಕೇಶಿರಾಜದಂನ್ನಾಯಕರ ಕಥೆ ಹೇಳಿ ಬಸವ ಪುರಾಣದ 05 ಕಾಂಡಗಳನ್ನು ಮುಗಿಸಲಾಗಿದೆ.

ಹೀಗೆ ಹಲವಾರು ಕವಿಗಳು ಮಾದರ ಚೆನ್ನಯ್ಯನನ್ನು ಮನಸಾರೆಸ್ತುತಿಸಿದ್ದಾರೆ. ಹೆಚ್ಚಾಗಿ ಎಲ್ಲರೂ ಮಾದರ ಚೆನ್ನಯ್ಯನ ಗುಪ್ತಭಕ್ತಿಯಂತೆ ಶಿವನಂಬಲಿಯನ್ನುಂಡ ಎಂದು ಅಂಬಲಿಯ ಪ್ರಸ್ತಾಪವನ್ನೆ ಮಾಡುತ್ತಾರೆ ಅಂಬಲಿಯ ಕಥೆ ಗುರುತರವಾದದ್ದು, ಮೊದಲು ಬಸವಣ್ಣವರಿಗೂ ಆ ನಂತರದಲ್ಲಿ ಎಲ್ಲರಿಗೂ ಪ್ರಚಲಿತವಾಯಿತು. ಆದರೆ ಮಾದರ ಚೆನ್ನಯ್ಯನ ನೈಜ ಚರಿತ್ರೆ ನಮಗೆ ತಿಳಿಯುತ್ತಿಲ್ಲ. ಕೆಲವೊಂದು ವೇಳೆ ಚಾನಪದಗಳಿಂದ ನಮ್ಮ ಹಿಂದಿನ ವರ ಇತಿಹಾಸವನ್ನು ಗುರುತಿಸಬಹುದಾಗಿದೆ. ಈ ಕುರಿತು ಮಾದರ ಚೆನ್ನಯ್ಯನ ಚರಿತ್ರೆಗೆ ಸಂಬಂಧಿಸಿದ ಜಾನಪದ ಗೀತೆಯೊಂದು ಲಭ್ಯವಿದೆ ಅದರಲ್ಲಿ ಚೆನ್ನಯ್ಯ ಇತಿಹಾಸದ ಆಕರ ಸಿಗಬಹುದೇನೊ. ಕಾಲಗರ್ಭದಲ್ಲಿ ಹೂತು ಹೋದ ಚೆನ್ನಯ್ಯ ನಿಜ ಚರಿತ್ರೆಯನ್ನು ಬೆಳಕಿಗೆ ತರಬೇಕಾದ ತುರ್ತು ಅಗತ್ಯತೆಯಿದೆ. ಮಂಟೆಸ್ವಾಮಿ ಕಾವ್ಯದಲ್ಲಿ ಚೆನ್ನಯ್ಯನನ್ನು ಕುರಿತು ಹೀಗೆ ಸ್ತುತಿಸಲಾಗಿದೆ. ಹಿಚಿ ಬೋರಲಿಂಗಯ್ಯನವರ ಮಂಟೆಸ್ವಾಮಿಕ ಕಾವ್ಯದಲ್ಲಿ

ಹೊಲೆಯರ ಹೊನ್ನಪ್ಪ
ಅವನೊಬ್ಬ ಶಿವಶರಣ
ಮಾದಿಗರ ಚೆನ್ನಯ್ಯ
ಅವನೊಬ್ಬ ಶಿವಶರಣ
ನನ್ನ ಮಡಿವಾಳ ಮಾಚಪ್ಪ
ಒಪ್ಪ ಶಿವಶರಣ
ಸುವಾ ಬಾ ಚೆನ್ನಬಸವಣ್ಣ ಸುವಾ ಬಾ

ಹೀಗೆ ಕಾವ್ಯ, ಕಥೆ, ಜನಪದ ಗೀತೆಗಳಲ್ಲಿ ಚೆನ್ನಯ್ಯನನ್ನು ಮತ್ತು ಅವನ ಭಕ್ತಿಯ ಮಹಿಮೆಯನ್ನು ಕುರಿತು ವಿವರಿಸಲಾಗಿದೆ.

**ಆಕರಗ್ರಂಥಗಳು:**


1) ಭೀಮಕವಿ – ಬಸವ ಪುರಾಣ ಸಂ.ಪು–37, ಪು.559
2) ಗುಬ್ಬಿಮಲ್ಲನಾರ್ಯ – ವೀರಶೈವಾಮೃತಪುರಾಣಸಂ. ಡಾ. ಆರ್.ಸಿ.ಹಿರೇಮಠ. ಪು:1438, ಭಾಗ–2, ಕಾಂಡ 8
3) ವಿರುಪಾಕ್ಷಪೊಂಡಿತ – ಚೆನ್ನಬಸವಪುರಾಣ, ಪು–625
4) ವಿರಕ್ತತೋಂಡದಾರ್ಯ – ಸಿದ್ದೇಶ್ವರಪುರಾಣ. ಪು–50
5) ಕವಿಅರುಣಾಚಲ–ಶಿವಶರಣರತ್ರಿಪದಿ. ಸಂ– ಡಾ. ಬಿ.ಶಿವಮೂರ್ತಿಶಾಸ್ತ್ರಿಗಳು ಪು–50.
6) ಪ್ರೊ. ಹಿ.ಚಿ.ಬೋರಲಿಂಗಯ್ಯ. ಸಂ–ಮಂಟೆಸ್ವಾಮಿ – ಬುಡಕಟ್ಟುಮಹಾಕಾವ್ಯ.